ಕ್ರ-63
ಸಿ-330
146ನೇ ಅಧಿವೇಶನ
ಕಂಪ್ಯೂಟರ್

# ಕರ್ನಾಟಕ ವಿಧಾನ ಪರಿಷತ್ತು

## ಮಾನ್ಯ ವಿಧಾನ ಪರಿಷತ್ ಸದಸ್ಯರುಗಳಾದ ಶ್ರೀ. ಬಿ.ಎಂ.ಫಾರೂಖ್, ಶ್ರೀ. ಸಲೀಂ ಅಹ್ಮದ್, ಶ್ರೀ. ನಸೀರ್ ಅಹ್ಮದ್, ಹಾಗೂ ಶ್ರೀ. ಸಿ.ಎಂ.ಇಬ್ರಾಹಿಂ ಅವರುಗಳು ನಿಯಮ 330 ರಡಿಯಲ್ಲಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.

**ಪ್ರಶ್ನೆ:**

ಆರ್ಥಿಕ ಇಲಾಖೆಯ ಅನುಮೋದನೆ ಪಡೆಯದೇ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಉನ್ನತ ಅಧಿಕಾರಿಗಳು ಇಲಾಖೆಯಲ್ಲಿ ಅನಧಿಕೃತ ಹೆಲ್ಪ್‌ಲೈನ್ ಕೇಂದ್ರವನ್ನು ಪ್ರಾರಂಭಿಸಿ ಯಾವುದೇ ಮಾನದಂಡಗಳಿಲ್ಲದೆ ಏಜೆನ್ಸಿಗಳ ಮೂಲಕ ಹೊರಗುತ್ತಿಗೆ ನೌಕರರನ್ನು ನೇಮಕ ಮಾಡಿಕೊಂಡು ಅವರುಗಳಿಗೆ ಅಲ್ಪಸಂಖ್ಯಾತರ ಕಲ್ಯಾಣಕ್ಕಾಗಿ ಮೀಸಲಿಟ್ಟ ಅನುದಾನದಲ್ಲಿ ವೇತನ ಹಾಗೂ ಇತರೆ ಭತ್ಯೆಗಳನ್ನು ಪಾವತಿ ಮಾಡುತ್ತಿರುವುದರಿಂದ ಅಲ್ಪಸಂಖ್ಯಾತರ ಕಲ್ಯಾಣಕ್ಕಾಗಿ ಮೀಸಲಿಟ್ಟ ಅನುದಾನವು ದುರ್ಬಳಕೆಯಾಗಿರುತ್ತಿರುವ ಕುರಿತು.

**ಉತ್ತರ:**

ಅಲ್ಪಸಂಖ್ಯಾತರ ಸಮುದಾಯದ ಕಲ್ಯಾಣಕ್ಕಾಗಿ ಇಲಾಖೆಯಿಂದ ಹಲವಾರು ಯೋಜನೆಗಳು ಅನುಷ್ಠಾನಗೊಳಿಸಲಾಗುತ್ತಿದ್ದು, ಈ ಯೋಜನೆಗಳ ಕುರಿತು ಸಮುದಾಯಕ್ಕೆ ಸಮರ್ಪಕವಾಗಿ ಮಾಹಿತಿ ತಲುಪಿಸಲು ದೂರವಾಣಿ, ಟ್ವೀಟರ್, ಫೇಸ್‌ಬುಕ್, ವಾಟ್ಸಪ್, ಗಳಂತಹ ಸಮೂಹ ಮಾಧ್ಯಮಗಳ ಮೂಲಕ ಜನರಿಗೆ ಇಲಾಖೆಯ ಯೋಜನೆಗಳ ಮಾಹಿತಿ/ಅರಿವು ಮೂಡಿಸುವುದು ಹಾಗೂ ಕುಂದುಕೊರತೆಗಳನ್ನು ಸ್ವೀಕರಿಸಲು ಸಹಾಯವಾಣಿ ಕೇಂದ್ರವನ್ನು ಸ್ಥಾಪಿಸಲಾಗಿರುತ್ತದೆ. ಈ ಕೇಂದ್ರಕ್ಕೆ ವಿಶೇಷವಾಗಿ ಶುಲ್ಕ ರಹಿತ ಸಹಾಯವಾಣಿ ಸಂಖ್ಯೆ: 8277799990 ಮುಖಾಂತರ ಸಾರ್ವಜನಿಕರು ಸಂಪರ್ಕಿಸಲು ಅನುಕೂಲ ಮಾಡಲಾಗಿದೆ ಹಾಗೂ ಕುಂದುಕೊರತೆಗಳನ್ನು ಬಗೆಹರಿಸಲು ಕ್ರಮವಹಿಸಲಾಗಿದೆ. ಮುಂದುವರೆದು ಈ ಕೇಂದ್ರವನ್ನು ಸ್ಥಾಪನೆ ಮಾಡಿದ ನಂತರ ಇದುವರೆಗೂ ಸುಮಾರು 43,165 ಕರೆ/ಅಹವಾಲುಗಳನ್ನು ಸ್ವೀಕರಿಸಿ 42,898 ಕರೆ/ಅಹವಾಲುಗಳನ್ನು ಪರಿಹರಿಸಲಾಗಿರುತ್ತದೆ.

ಸರ್ಕಾರಿ ಆದೇಶ ಸಂಖ್ಯೆ: ಎಮ್‌ಡಬ್ಲ್ಯೂಡಿ 208 ಎಮ್ ಡಿ ಎಸ್ 2021 ದಿ:26.04.2021 ರ ಆದೇಶದನ್ವಯ ನಿರ್ದೇಶನಾಲಯದ ಕೇಂದ್ರ ಕಛೇರಿಯಲ್ಲಿ ಸಹಾಯವಾಣಿ ಕೇಂದ್ರವನ್ನು ಸ್ಥಾಪಿಸಿ ವ್ಯವಸ್ಥಿತಗೊಳಿಸಲಾಗಿರುತ್ತದೆ.

ಈ ಹೆಲ್ಪ್‌ಲೈನ್ ಕೇಂದ್ರವನ್ನು ಪೈಲೆಟ್ ಆಧಾರದ ಮೇಲೆ ಪ್ರಾರಂಭಿಸಲಾಗಿದ್ದು, ದಿ:25.02.2022ರಂದು ಅಧಿಕೃತವಾಗಿ ವರ್ಚ್ಯುವಲ್ ಕಾರ್ಯಕ್ರಮಗಳ ಮುಖಾಂತರ ಅಲ್ಪಸಂಖ್ಯಾತರ ಸಹಾಯವಾಣಿ ಕೇಂದ್ರವನ್ನು ಉದ್ಘಾಟನೆ ಮಾಡಲಾಗಿರುತ್ತದೆ. ಈ ಕೇಂದ್ರವನ್ನು ನಿರ್ವಹಣೆ ಮಾಡಲು ಇ-ಟೆಂಡರ್‌ನ್ನು ಆಹ್ವಾನಿಸಿ ನಿಯಮಾನುಸಾರ

...2

ಕಾರ್ಯಾದೇಶ ನೀಡಿ ಹೊರಗುತ್ತಿಗೆ ಸಿಬ್ಬಂದಿಗಳ ಸೇವೆಯನ್ನು ಪಡೆದು ಕಾರ್ಯನಿರ್ವಹಣೆ ಮಾಡಲಾಗುತ್ತಿದೆ. ಇದರ ನಿರ್ವಹಣೆಯನ್ನು ನಿರ್ದೇಶನಾಲಯದ ಆಡಳಿತ ವೆಚ್ಚ ಲೆಕ್ಕಶೀರ್ಷಿಕೆ ಹಾಗೂ ಪ್ರಧಾನ ಮಂತ್ರಿ ಜನ ವಿಕಾಸ ಕಾರ್ಯಕ್ರಮ ಯೋಜನೆಯ ಲೆಕ್ಕಶೀರ್ಷಿಕೆ ಅಡಿಯಲ್ಲಿ ಒದಗಿಸಲಾಗುತ್ತಿದೆ. ಈ ಅನುದಾನದಲ್ಲಿ ಆಡಳಿತಾತ್ಮಕ ಸಂವಹನ (IEC Activities) ಚಟುವಟಿಕೆಗಳಿಗೆ ನಿರ್ವಹಿಸುತ್ತಿದ್ದು, ಇದಕ್ಕಾಗಿ ಹೆಚ್ಚುವರಿ ಅನುದಾನದ ಅವಶ್ಯಕತೆ ಇರುವುದಿಲ್ಲ. ಆದ್ದರಿಂದ ಆರ್ಥಿಕ ಇಲಾಖೆಯ ಅನುಮೋದನೆ ಅಗತ್ಯವಿರುವುದಿಲ್ಲ.

ಅಲ್ಪಸಂಖ್ಯಾತರ ನಿರ್ದೇಶನಾಲಯದ ಆದೇಶ ಸಂಖ್ಯೆ: ಅಸಂನಿ/ ಸಹಾಯವಾಣಿ.ತ/ ಸಿಆರ್-185/2021-22 ರನ್ವಯ ಹೊಸದಾಗಿ ನೇಮಕಗೊಂಡ ಜಿಲ್ಲಾ ಅಧಿಕಾರಿಗಳನ್ನು ಹೆಲ್ಪ್‌ಲೈನ್ ಕೇಂದ್ರದ ಶಿಫ್ಟ್ ಅಧಿಕಾರಿಗಳಾಗಿ ನೇಮಿಸಿ, ಪ್ರತಿ ತಿಂಗಳು ಒಬ್ಬರಂತೆ ಆಡಳಿತಾತ್ಮಕ ಸಂವಹನ (IEC Activities) ಚಟುವಟಿಕೆಗಳನ್ನು ನಿರ್ವಹಿಸುವ ಬಗ್ಗೆ ತರಬೇತಿ ನೀಡುವುದರೊಂದಿಗೆ ಹೆಲ್ಪ್‌ಲೈನ್ ಕೇಂದ್ರದ ದೈನಂದಿನ ಕಾರ್ಯಾಚರಣೆಗಳನ್ನು ಕೈಗೊಳ್ಳಲಾಗುತ್ತಿದೆ.

ಸಂಖ್ಯೆ: **MWD 93 LMQ 2022**

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ